ಹನ್ನೊಂದು ರಾಷ್ಟ್ರಪ್ರಶಸ್ತಿಗಳು ಕನ್ನಡದ ಪಾಲಾಗಿವೆ. ಇದನ್ನು ಕನ್ನಡ ಚಿತ್ರರಂಗದ ಸೃಜನಶೀಲ ಉಬ್ಬರದ ಮುನ್ಸೂಚನೆಯಾಗಿಯೂ ನೋಡಬಹುದು.

■ ಪದ್ಮನಾಭ ಭಟ್



'ನಾತಿಚರಾಮಿ' ಶ್ರುತಿ ಹರಿಹರನ್



'ಒಂದಲ್ಲಾ ಎರಡಲ್ಲಾ' ಮಾಸ್ಟರ್ ರೋಹಿತ್



'ಕೆಜಿಎಫ್' ಯಶ್

# ಕಂಗ್ರ್ಯಾಟ್ಸ್ ಚಂದನವನ!



ಮಂಸೋರೆ



ಡಿ. ಸತ್ಯಪ್ರಕಾಶ್



ಪಿ. ಶೇಷಾದ್ರಿ



ರಿಷಭ್ ಶೆಟ್ಟಿ

ಮಲೆನಾಡು ಮತ್ತು ಉತ್ತರ ಕರ್ನಾಟಕದ ಭಾಗ ಭೀಕರ ನೆರೆಯ ತಾಂಡವ ನೃತ್ಯಕ್ಕೆ ಸಿಕ್ಕು ನಲುಗುತ್ತಿದೆ. ಇನ್ನೊಂದೆಡೆ ಇತ್ತೀಚೆಗಷ್ಟೇ ಪ್ರಕಟವಾದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಪಟ್ಟಿ ಕನ್ನಡ ಚಿತ್ರರಂಗದ ಮೇಲೆ ಪ್ರಶಸ್ತಿಗಳ ಹೂಮಳೆಗರೆದಿದೆ. ಒಂದೆರಡಲ್ಲ ಬರೋಬ್ಬರಿ ಹನ್ನೊಂದು ಪ್ರಶಸ್ತಿಗಳು ಕನ್ನಡಕ್ಕೊಲಿದಿವೆ. ಇತಿಹಾಸದಲ್ಲಿಯೇ ಮೊದಲ ಬಾರಿಗೆ ಕನ್ನಡಕ್ಕೆ ಇಷ್ಟೊಂದು ಪ್ರಶಸ್ತಿಗಳು ಬಂದಿರುವುದು. ನೆರೆಯ ನೋವಿನ ನಡುವೆಯೆ ಕನ್ನಡಮ್ಮನ ಕೊರಳಿಗೆ ಬಿದ್ದ ಸೃಜನಶೀಲತೆಯ ಕುಸುಮಮಾಲೆಯಿದು.

ಸಾಮಾನ್ಯವಾಗಿ ಪ್ರತಿವರ್ಷ ರಾಷ್ಟ್ರಪ್ರಶಸ್ತಿ ಪ್ರಕಟವಾದಾಗ ಸಾಮಾನ್ಯ ಜನರು ಇದುವರೆಗೆ ಕಂಡು ಕೇಳರಿಯದ ಸಿನಿಮಾಗಳ ಹೆಸರು ಪಟ್ಟಿಯಲ್ಲಿರುತ್ತಿದ್ದವು. ರಾಷ್ಟ್ರಪ್ರಶಸ್ತಿ ಬರುವವರೆಗೆ ಹಲವು ಗೂಗಲ್ ಸರ್ಚ್‌ನಲ್ಲಿಯೂ ಸಿಗದ ಉದಾಹರಣೆಗಳೂ ಇವೆ! ಆದರೆ ಈ ಸಲ ಪ್ರಶಸ್ತಿಗೆ ಭಾಜನವಾಗಿರುವ ಬಹುತೇಕ ಎಲ್ಲ ಸಿನಿಮಾಗಳೂ (ಮೂಕಜ್ಜಿಯ ಕನಸುಗಳು ಒಂದನ್ನು ಬಿಟ್ಟು) ಚಿತ್ರಮಂದಿರಗಳಲ್ಲಿ ತೆರೆಕಂಡಿರುವಂಥವೇ. ಇದು ಕನ್ನಡ ಮುಖ್ಯವಾಹಿನಿಯಲ್ಲಿಯೇ ಮೌಲ್ಯಯುತವಾದ ಸಿನಿಮಾ ಪ್ರಯೋಗಗಳೂ ನಡೆಯುತ್ತಿರುವುದಕ್ಕೆ ಸೂಚನೆಯಾಗಿಯೂ ನೋಡಬಹುದು.

ಮಂಸೋರೆ ನಿರ್ದೇಶನದ 'ನಾತಿಚರಾಮಿ', ಒಟ್ಟು ಐದು ವಿಭಾಗಗಳಲ್ಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. 'ಅತ್ಯುತ್ತಮ ಪ್ರಾದೇಶಿಕ ಚಿತ್ರ' ಪ್ರಶಸ್ತಿ ಪಡೆದುಕೊಂಡಿರುವುದೂ ಇದೇ ಚಿತ್ರ. ಈ ಚಿತ್ರದ ಹಾಡಿಗಾಗಿ ಬಿಂದುಮಾಲಿನಿ ನಾರಾಯಣಸ್ವಾಮಿ, ತೀರ್ಪುಗಾರರ ವಿಶೇಷ ಮೆಚ್ಚುಗೆ ಪಡೆದ ಶ್ರುತಿ ಹರಿಹರನ್, ಅತ್ಯುತ್ತಮ ಗೀತಸಾಹಿತ್ಯಕ್ಕಾಗಿ, ಸಂಕಲನಕ್ಕಾಗಿಯೂ ಪ್ರಶಸ್ತಿ ಸಿಕ್ಕಿವೆ. 'ಮೀ ಟೂ' ವಿವಾದದಲ್ಲಿದ್ದ ಶ್ರುತಿ ಹರಿಹರನ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ ಎಂಬ ಕಾರಣಕ್ಕೆ, ಮಹಿಳೆಯರ ಕಾಮಾಭಿಲಾಷೆಯ ಕುರಿತು ಮಾತಾಡುತ್ತದೆ ಎಂಬ ಕಾರಣಕ್ಕೆ ಸಂಕುಚಿತವಾದಿಗಳ ಕಡುಟೀಕೆಗೆ ಗುರಿಯಾಗಿದ್ದ 'ನಾತಿಚರಾಮಿ' ಹೆಚ್ಚು ದಿನ ಚಿತ್ರಮಂದಿರಗಳಲ್ಲಿ ಉಳಿದುಕೊಂಡಿರಲಿಲ್ಲ. ಆದರೆ ಶ್ರುತಿ ಮತ್ತು ಸಿನಿಮಾಗೆ ಸಿಕ್ಕ ಪ್ರಶಸ್ತಿಗಳು ಈ ಎಲ್ಲ ಟೀಕೆಗೆ ಕಾಲವೇ ಕೊಟ್ಟ ತಪರಾಕಿಯಂತಿದೆ.

ಇನ್ನು ಸದಭಿರುಚಿ ಮತ್ತು ಮನರಂಜನೆ ಎರಡನ್ನೂ ಹದವಾಗಿ ಪಾಕ ಮಾಡಿ ರೂಪಿಸಿದ್ದ ಡಿ. ಸತ್ಯಪ್ರಕಾಶ್ ನಿರ್ದೇಶನದ 'ಒಂದಲ್ಲಾ ಎರಡಲ್ಲಾ' ಕೂಡ ಬಿಡುಗಡೆಯಾಗಿ ವಾರದೊಳಗೆ ಎತ್ತಂಗಡಿಯಾಗಿ ಜನರನ್ನು ತಲುಪಲೇ ಇಲ್ಲ. ಆದರೆ ಈ ಚಿತ್ರಕ್ಕೆ ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿ ಸಿಕ್ಕಿರುವುದು ವಾಣಿಜ್ಯಾತ್ಮಕ ಸೋಲಿನ ಗಾಯಕ್ಕೆ ಲೇಪಿಸಿದ ದಿವ್ಯೌಷಧದ ಹಾಗಿದೆ. ಇದರಲ್ಲಿ ನಟಿಸಿರುವ ಹುಡುಗ ಪಿ.ವಿ. ರೋಹಿತ್‌ಗೆ ಅತ್ಯುತ್ತಮ ಬಾಲನಟ ಪ್ರಶಸ್ತಿಯೂ ಸಿಕ್ಕಿದೆ.

ಅತ್ಯುತ್ತಮ ಮಕ್ಕಳ ಚಿತ್ರ ಎಂದು ಗುರ್ತಿಸಲ್ಪಟ್ಟಿರುವ ರಿಷಭ್ ಶೆಟ್ಟಿ ನಿರ್ದೇಶನದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು' ಮತ್ತು ಅತ್ಯುತ್ತಮ ವಿಎಫ್‌ಎಕ್ಸ್ ಮತ್ತು ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿ ಪಡೆದುಕೊಂಡಿರುವ ಪ್ರಶಾಂತ್ ನೀಲ್ ಅವರ 'ಕೆಜಿಎಫ್' ಸಿನಿಮಾ ಚಿತ್ರಮಂದಿರಳಲ್ಲಿಯೂ ಭರ್ಜರಿ ಗೆಲುವು ದಾಖಲಿಸಿದ ಸಿನಿಮಾಗಳು.

ಇವುಗಳ ಜೊತೆಗೆ ಪಿ. ಶೇಷಾದ್ರಿ ನಿರ್ದೇಶನದ 'ಮೂಕಜ್ಜಿಯ ಕನಸುಗಳು', ನ್ಯಾಷನಲ್ ಆರ್ಕೈವ್ಸ್‌ಗೆ ಆಯ್ಕೆಯಾಗಿದೆ. ಇದೂ ಕನ್ನಡ ಸಾಹಿತ್ಯ ಮತ್ತು ಸಿನಿಮಾ ನಡುವೆ ಇನ್ನೂ ಉಳಿದುಕೊಂಡಿರುವ ಕಳ್ಳುಬಳ್ಳಿ ಸಂಬಂಧವನ್ನು ಸೂಚಿಸುವ ಹಾಗಿದೆ.

ಮೊದಲೇ ಹೇಳಿದಂತೆ ಇದು ಐತಿಹಾಸಿಕ ಸಂದರ್ಭ. ಹಾಗೆಯೇ ಆತ್ಮಾವಲೋಕನದ ಸಂದರ್ಭವಾಗಿಯೂ ಚಿತ್ರರಂಗದವರು ನೋಡಿಕೊಳ್ಳಬೇಕಾದ ಅಗತ್ಯವಿದೆ. ನಿರ್ಮಾಪಕರು, ನಟರು, ವಿತರಕರು ಎಲ್ಲರೂ ಸೇರಿ ಪ್ರಯೋಗಶೀಲ ಆಸಕ್ತಿ ಉಳ್ಳ ನಿರ್ದೇಶಕನ ಕನಸುಗಳನ್ನು ಚಿತ್ರರಂಗದ ಹೆದ್ದಾರಿಯಲ್ಲೇ ನಡೆಸುವ ಕಾಳಜಿ ತೋರಬೇಕಿದೆ. ಹಾಗೆ ಆದಾಗ ಮಾತ್ರ ಕನ್ನಡ ಚಿತ್ರಗಳು ಪ್ರಶಸ್ತಿಗಳ ಪಟ್ಟಿಯೊಟ್ಟಿಗೆ ಜನರ ಮನಸ್ಸಿನಲ್ಲಿಯೂ ಹೆಚ್ಚು ಸ್ಥಾನಪಡೆಯಲು ಸಾಧ್ಯವಾಗುತ್ತದೆ. ■